


ಕಂಡಾಗ ಮಗಳಿಗೆ ಒಳಗೊಳಗೇ ಸಂತೋಷವಾಗಿ ವಕ್ರ ನಗೆ ಬೀರುತ್ತಾಳೆ. ದೇಸಾಯಿಯವರು 'ಆ ನಗುವಿನಲ್ಲಿ ವಿಜಯಾನಂದವಿತ್ತು!' ಎಂದು ಹೇಳಿ ಕಥೆ ಮುಗಿಸುತ್ತಾರೆ.

ತಾನು ಕ್ಷಯದಂತಹ ಮಾರಣಾಂತಿಕ (ಆ ಕಾಲದಲ್ಲಿ, ಈಗಲ್ಲ) ರೋಗಕ್ಕೆ ತುತ್ತಾದರೂ ಅಡ್ಡಿಯಿಲ್ಲ, ತನ್ನನ್ನು ಕಾಡಿದ ತಾಯಿಗೆ ಈಗ ನೋವಾಗುತ್ತದೆ ಎನ್ನುವ ವಿಕೃತ ಸಂತೋಷ ಮಗಳದು. ಈ ಭಾವವನ್ನು ಹಲವರು ತಮ್ಮ ಬದುಕಲ್ಲಿಯೂ ಕಂಡಿರುವ ಅಥವಾ ಅನುಭವಿಸಿರುವ ಸಾಧ್ಯತೆಗಳು ಹೆಚ್ಚು. ಇಬ್ಬರು ವ್ಯಕ್ತಿಗಳ ಮಧ್ಯೆ ಇಂತಹ ಸಂಗತಿ ಜರುಗಬೇಕಾದರೆ ಅವರಿಬ್ಬರಲ್ಲಿ ಯಾವುದೋ ಬಗೆಯ ಗಟ್ಟಿಯಾದ ಅನುಬಂಧವಿದ್ದು, ಒಬ್ಬರಿಗೆ ಮತ್ತೊಬ್ಬರಿಂದ ಅನ್ಯಾಯವಾಗಿರಬೇಕು. ದೇಸಾಯರ ಕಥೆಯಲ್ಲಿ ಸ್ಪಷ್ಟವಾಗಿ ತಾಯಿಗೆ ಮಗಳ ಮೇಲೆ ಪ್ರೀತಿಯಿದೆ. ಆದರೆ, ಆಕೆಯ ತಾಯ್ತನದ ದರ್ಪದಿಂದಾಗಿ ಮಗಳಿಗೆ ಅನ್ಯಾಯವಾಗಿದೆ. ಅದಕ್ಕೆ ಸೇಡು ತೀರಿಸಿಕೊಳ್ಳಲು ಮಗಳು ತನ್ನ ದೇಹ ದಂಡನೆಗೊಳಗಾದರೂ ಸಂತೋಷ ಪಡುತ್ತಾಳೆ. ಇಲ್ಲಿ ಅವಳಾಗಿಯೇ ತನ್ನ ದೇಹ ದಂಡನೆ ಮಾಡಿಕೊಂಡಿಲ್ಲವಾದರೂ, ಅವಳ ಆ ತೀಕ್ಷ್ಣ ನಗೆಯಲ್ಲಿ ಅಮ್ಮನನ್ನು ನೋಯಿಸಲು ತನ್ನ ಕಾಯವನ್ನು ಸ್ವತಃ ದಂಡಿಸಲು ಅಂಜದ ಧೈರ್ಯವು ಕಾಣುತ್ತದೆ.

ಮೇಲಿನ ಸನ್ನಿವೇಶದಲ್ಲಿ ಪ್ರೀತಿಯ ಅನುಬಂಧ ನೋವಿಗೆ ಕಾರಣವಾದರೆ, ಕೆಲವೊಮ್ಮೆ ಕಾಮದ ಬಂಧವೂ ಇಂತಹದೇ ನೋವನ್ನು ಹೊಮ್ಮಿಸಬಲ್ಲದು. ಇಂತಹ ಅಪರೂಪದ ಕಥೆಯೊಂದು ಮಹಾಭಾರತದ ವಿರಾಟಪರ್ವದಲ್ಲಿ ನಮಗೆ ಸಿಗುತ್ತದೆ. ಉಪಕೀಚಕರನ್ನು ಕೊಂದ ನಂತರ ಭೀಮಸೇನನು ಈ ಕಥೆಯನ್ನು